1	2	3	4
10	Mandya	539.35	366.00
11	Chikmagalur	512.70	319.82
12	Hassan	637.10	504.87
13	Kodagu	52.90	114.00
14	D.Kannada	152.00	60.00
15	Udupi	102.00	35.00
16	Gulbarga	1036.00	588.38
17	Bidar	395.10	282.38
18	Raichur	474.10	296.25
19	Koppal	426.15	264.25
20	Bellary	640.65	441.58
21	Belgaum	990.30	824.25
22	Bijapur	427.40	288.80
23	Bagalkot	475.60	346.63
24	Dharwad	505.70	272.80
25	Gadag	507.30	307.75
26	Haveri	694.05	404.45
27	Uttara Kannada	511.20	322.38
28	Director, D.M.C.,	0.00	25.00
29	RDED	255.00	0.00
30	B'lore City Corpn,	50.00	0.00
31	Director, Agri.Dept	1285.00	1000.00
32	Director, Hort. Dept	15.00	0.00
33	Int.Subsidy, Apex Bank	3300.00	0.00
	Total	**19231.00**	**10640.28**

ಜೋಡಿ ರಸ್ತೆಗಳ ಮೀಡಿಯನ್ನನಲ್ಲಿ ಫೆನ್ಸಿಂಗ್ ಅಳವಡಿಕೆ

4289(5216) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಡ್ಯ ನಗರದ ಮೂಲಕ ಹೋಗುವ ಬೆಂಗಳೂರು ಮೈಸೂರು ಹೆದ್ದಾರಿಯನ್ನು ಮಂಡ್ಯ ನಗರದ ಪರಿಮಿತಿಯಲ್ಲಿ ಜೋಡಿ ರಸ್ತೆಯನ್ನಾಗಿ ಮಾರ್ಪಡಿಸಲಾಗಿದೆಯೇ ;

ಆ) ಹಾಗಿದ್ದಲ್ಲಿ, ಈಜೋಡಿ ರಸ್ತೆಗಳಲ್ಲಿ ದಟ್ಟವಾದ ವಾಹನ ಸಂಚಾರ ಮತ್ತು ಜನಸಂದಣಿ ಇರುವುದನ್ನು ಗಮನಿಸಲಾಗಿದೆಯೇ ;

ಇ) ಗಮನಿಸಲಾಗಿದ್ದಲ್ಲಿ, ಅತಿ ಹೆಚ್ಚಿನ ಪ್ರಮಾಣದ ವಾಹನ ಸಂಚಾರ ಇರುವ ಈ ರಸ್ತೆಗಳಲ್ಲಿ ಪಾದಚಾರಿಗಳು ಮನಬಂದಂತೆ ರಸ್ತೆ ದಾಟುವುದರಿಂದಾಗಿ ವಾಹನ ಸಂಚಾರಕ್ಕೆ ತಡೆಯುಂಟಾಗಿ ಅನಾನುಕೂಲವಾಗಿರುವುದನ್ನು ಮತ್ತು ಅಪಘಾತಕ್ಕೂ ಅವಕಾಶವಾಗುತ್ತಾ ಇರುವುದನ್ನು ಸರ್ಕಾರವು ಮನಗಂಡಿದೆಯೇ ;

ಈ) ಹಾಗಿದ್ದಲ್ಲಿ ಸುರಕ್ಷತಾ ಮತ್ತು ಮುಂಜಾಗರೂಕತಾ ಕ್ರಮವಾಗಿ ಜೋಡಿ ರಸ್ತೆಗಳ ಮೀಡಿಯನ್ನನಲ್ಲಿ ಫೆನ್ಸಿಂಗ್ (Chain link Fencing) ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೇ ;

ಉ) ಕೈಗೊಳ್ಳುವುದಾದಲ್ಲಿ, ಅದರ ವಿವರಗಳೇನು ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹೌದು ಜೋಡಿ ರಸ್ತೆಯನ್ನಾಗಿ ಮಾರ್ಪಡಿಸಲಾಗಿದೆ.

ಆ) ಗಮನಿಸಲಾಗಿದೆ.

ಇ) ಮನಗಂಡಿರುತ್ತದೆ.

ಈ) ಇದು ಲೋಕೋಪಯೋಗಿ ಇಲಾಖೆ ಸಂಬಂದಿಸಿರುವುದಿಲ್ಲ.

ಉ) "ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ" ಯು ಪ್ರತ್ಯೇಕ ಅನುದಾನದಡಿ ಕೈಕೊಳ್ಳಬೇಕಾಗುವುದು.

ಮಂಡ್ಯ ನಗರದ ಪರಿಮಿತಿಯಲ್ಲಿ, ವೃತ್ತ ಹಾಗೂ ಪಾದಚಾರಿ ಪಥಗಳ ಅಭಿವೃದ್ಧಿ

4290(5217) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಮಂಡ್ಯ ನಗರದ ಪರಿಮಿತಿಯಲ್ಲಿ ರಸ್ತೆಯಲ್ಲಿನ ವೃತ್ತಗಳನ್ನು ಹಾಗೂ ನಗರದ ವ್ಯಾಪ್ತಿಯಲ್ಲಿನ ರಸ್ತೆಯ ಪಾದಚಾರಿಗಳ ಪಥವನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳನ್ನು ರೂಪಿಸಲಾಗಿದೆಯೇ ;

ಆ) ರೂಪಿಸಲಾಗಿದ್ದಲ್ಲಿ, ಅದರ ವಿವರಗಳೇನು ;

ಇ) ಕಾಮಗಾರಿಗಳು ಯಾವ ಹಂತದಲ್ಲಿದೆ ;

ಈ) ನಗರ ಪರಿಮಿತಿ ರಸ್ತೆಯಲ್ಲಿನ ಅತಿ ಸೂಕ್ಷ್ಮ ಹಾಗೂ ಜನನಿಬಿಡ ಸ್ಥಳಗಳಲ್ಲಿ ಪಾದಚಾರಿಗಳ ಪಥದಿಂದ (Foot path) ಮುಖ್ಯ ರಸ್ತೆಗೆ ಇಳಿಯದ ಹಾಗಿ ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗುವುದೇ ;

ಉ) ಹಾಗೆ ಕ್ರಮ ಕೈಗೊಳ್ಳುವುದಾದಲ್ಲಿ ಅದರ ರೂಪುರೇಷೆಗಳೇನು ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಮಂಡ್ಯ ಜಿಲ್ಲೆಯ ವಿಶೇಷ ಸಮಗ್ರ ಅಭಿವೃದ್ಧಿ ಯೋಜನೆಯ ಮೊದಲನೇ ಹಂತದ ಪ್ಯಾಕೇಜ್ ನಂ. 1 ರಲ್ಲಿ ಮಂಡ್ಯ ನಗರದ ಪರಿಮಿತಿಯಲ್ಲಿ ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿನ ವೃತ್ತಗಳ ಹಾಗೂ ಪಾದಚಾರಿಗಳ ಪಥವನ್ನು ಅಭಿವೃದ್ಧಿ ಪಡಿಸಲು ಕಾಮಗಾರಿಯನ್ನು ಕೈಗೊಂಡಿದೆ.

ಆ) ಸದರಿ ಹೆದ್ದಾರಿಯಲ್ಲಿ ಮಂಡ್ಯ ನಗರದ ಪರಿಮಿತಿಯಲ್ಲಿ ನಾಲ್ಕು ವೃತ್ತಗಳನ್ನು ಅಭಿವೃದ್ಧಿ ಪಡಿಸಲು ರೂ. 20 ಲಕ್ಷಗಳನ್ನು ಇಡುಗಂಟಾಗಿ ಮಂಜೂರಾದ ಪ್ಯಾಕೇಜ್‌ನಲ್ಲಿ ವ್ಯವಸ್ಥಿಸಿಕೊಂಡಿದೆ. ಹಾಗೂ ಪಾದಚಾರಿಗಳ ಪಥಧ ಅಭಿವೃದ್ಧಿಯನ್ನು ರೂ. 95.79 ಲಕ್ಷಗಳಲ್ಲಿ ಕೈಗೊಂಡಿದೆ.